ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ

6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560003

****************************************************************************************************

**ಜುಲೈ 2021ರ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಸಂಬಂಧಿಸಿದಂತೆ ಪುನರಾವರ್ತಿತ ಪ್ರಶ್ನೆಗಳು (ಎಫ್.ಎ.ಕ್ಯೂ)**

****************************************************************************************************

ಜುಲೈ–2021ರ ಎಸ್.ಎಸ್.ಎಲ್.ಸಿ. ಮುಖ್ಯ ಪರೀಕ್ಷೆಯನ್ನು 19.07.2021 ಮತ್ತು 22.07.2021 ರಂದು ನಡೆಸಲಾಗುತ್ತಿದ್ದು, ಕೋವಿಡ್ 19ರ ವ್ಯಾಪಕತೆಯ ಹಿನ್ನೆಲೆಯಲ್ಲಿ ಪರೀಕ್ಷಾ ವಿಧಾನವನ್ನು ಸರಳೀಕರಿಸಲಾಗಿದೆ. ಈ ಬಗ್ಗೆ ವಿದ್ಯಾರ್ಥಿಗಳು ಮತ್ತು ಪೋಷಕರು ಮಾಹಿತಿಯನ್ನು ಕೋರಿ ಮಂಡಳಿಯ ಸಹಾಯವಾಣಿ ಹಾಗೂ ಅಧಿಕಾರಿಗಳು ಮತ್ತು ಸಿಬ್ಬಂದಿಯವರಿಗೆ ಕರೆ ಮಾಡಿ ಮಾಹಿತಿಯನ್ನು ಕೇಳುತ್ತಿದ್ದು, ಈ ಬಗ್ಗೆ ವಿದ್ಯಾರ್ಥಿಗಳಿಗೆ, ಪೋಷಕರಿಗೆ ಮತ್ತು ಶಿಕ್ಷಕರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಎಫ್.ಎ.ಕ್ಯೂ ಮಾದರಿಯಲ್ಲಿ ಈ ಮೂಲಕ ಮಾಹಿತಿಯನ್ನು ನೀಡಲಾಗುತ್ತಿದೆ.

**1. ಪರೀಕ್ಷೆಯನ್ನು ಎಷ್ಟು ದಿನಗಳವರೆಗೆ ನಡೆಸಲಾಗುತ್ತಿದೆ?**

ಉ: ಕೋವಿಡ್ 19ರ ಹಿನ್ನೆಲೆಯಲ್ಲಿ, ವಿದ್ಯಾರ್ಥಿಗಳ ಆರೋಗ್ಯದ ಸುರಕ್ಷತೆ ಮತ್ತು ಮುಂದಿನ ಶೈಕ್ಷಣಿಕ ಆಯ್ಕೆಗೆ ಅನುಕೂಲಕರವಾಗುವ ನಿಟ್ಟಿನಲ್ಲಿ ಎರಡು ದಿನಗಳ ಕಾಲ ಪರೀಕ್ಷೆಯನ್ನು ನಡೆಸಲಾಗುತ್ತಿದೆ. ಮೂರು ಕೋರ್ ವಿಷಯಗಳ(ಗಣಿತ, ವಿಜ್ಞಾನ, ಸಮಾಜ ವಿಜ್ಞಾನ)ನ್ನು ಒಂದು ದಿನ ಮತ್ತು ಭಾಷಾ ವಿಷಯಗಳ(ಪ್ರಥಮ ಭಾಷೆ, ದ್ವಿತೀಯ ಭಾಷೆ, ತೃತೀಯ ಭಾಷೆ/ಎನ್.ಎಸ್.ಕ್ಯೂ.ಎಫ್)ನ್ನು ಒಂದು ದಿನ ಪರೀಕ್ಷೆಯನ್ನು ಬೆಳಿಗ್ಗೆ 10.30 ರಿಂದ 01.30ರವರಗೆ ನಡೆಸಲಾಗುವುದು. ಜೆ.ಟಿ.ಎಸ್ ವಿಷಯಗಳ ಪರೀಕ್ಷೆಯನ್ನು ಕೋರ್ ವಿಷಯಗಳ ಅಪರಾಹ್ನ ಮಧ್ಯಾಹ್ನ 02.30 ರಿಂದ 05.00 ಗಂಟೆಯವರೆಗೆ ನಡೆಸಲಾಗುತ್ತದೆ. ವಿಭಿನ್ನ ಸಾಮರ್ಥ್ಯವುಳ್ಳ ವಿದ್ಯಾರ್ಥಿಗಳಿಗೆ 15 ನಿಮಿಷಗಳ ಹೆಚ್ಚುವರಿ ಕಾಲಾವಕಾಶವನ್ನು ನೀಡಲಾಗಿದೆ.

**2. ಪ್ರಶ್ನೆಪತ್ರಿಕೆಯ ಸ್ವರೂಪ ಹೇಗಿರುತ್ತದೆ? ಮತ್ತು ಎಷ್ಟು ಅಂಕಗಳಿಗೆ ಪರೀಕ್ಷೆ ನಡೆಸಲಾಗುತ್ತದೆ?**

ಉ: ಪ್ರಸ್ತುತ ಪರೀಕ್ಷೆಗೆ ಮಾತ್ರ ಸೀಮಿತವಾದಂತೆ ಪ್ರಸಕ್ತ ವರ್ಷ ಮೌಲ್ಯಮಾಪನಕ್ಕೆ ಗುರುತಿಸಿರುವ ಅಂಶಗಳ ಆಧಾರದ ಮೇಲೆ ಪ್ರಶ್ನೆಪತ್ರಿಕೆಯು ಬಹು ಆಯ್ಕೆ ಪ್ರಶ್ನೆಗಳ ಮಾದರಿ (Multiple Choice Question Based)ಯನ್ನು ಹೊಂದಿದ್ದು, ವಿಷಯವಾರು ಗರಿಷ್ಠ 40 ಅಂಕಗಳಿಗೆ ಪರೀಕ್ಷೆಯನ್ನು ನಡೆಸಲಾಗುತ್ತಿದೆ. ಈ ಪ್ರಶ್ನೆಪತ್ರಿಕೆಯ ಮಾದರಿಯು ಪ್ರಸ್ತುತ ಪರೀಕ್ಷೆಗೆ ಸಂಬಂಧಿಸಿದಂತೆ ಎಲ್ಲಾ ವಿಧದ ಅಂದರೆ CCERF, CCERR, CCEPF, CCEPR, NSR & NSPR ಅಭ್ಯರ್ಥಿಗಳಿಗೂ ಒಂದೇ ಮಾದರಿಯದ್ದಾಗಿರುತ್ತದೆ. ಕೋರ್ ವಿಷಯಗಳನ್ನು ಒಳಗೊಂಡಂತೆ ಪತ್ರಿಕೆ–01, ಭಾಷಾ ವಿಷಯಗಳನ್ನು ಒಳಗೊಂಡಂತೆ ಪತ್ರಿಕೆ–02 ಇರುತ್ತದೆ. ಕಿರಿಯ ತಾಂತ್ರಿಕ ಶಾಲೆಗಳಿಗೆ ಮಾತ್ರ ಅನ್ವಯವಾಗುವಂತೆ ಜೆ.ಟಿ.ಎಸ್ ವಿಷಯಗಳನ್ನು ಒಳಗೊಂಡ ಪತ್ರಿಕೆ–03 ಇರುತ್ತದೆ.

**3. ಉತ್ತರಪತ್ರಿಕೆಗಳ ಮಾದರಿ ಹೇಗಿರುತ್ತದೆ?**

ಉ: ಪ್ರಶ್ನೆಪತ್ರಿಕೆಯು ಬಹು ಆಯ್ಕೆ ಪ್ರಶ್ನೆಗಳ ಮಾದರಿಯನ್ನು ಒಳಗೊಂಡಿರುವುದರಿಂದ ಉತ್ತರ ಪತ್ರಿಕೆಯು ಒ.ಎಂ.ಆರ್ ಮಾದರಿಯಲ್ಲಿದ್ದು, ವಿದ್ಯಾರ್ಥಿಗೆ ಸಂಬಂಧಿಸಿದಂತೆ Subject Name & Code, Register Number, U-Dise/KSEEB School Code, SATS ID, Candidate Name, Gender, District Code/Name, Block Code/Name, Centre Code & Address, Candidate Type, Medium, Date Of Examination & Physical Condition, ವಿದ್ಯಾರ್ಥಿಯ ಫೋಟೋ, ಸಹಿ ಮತ್ತು ಕ್ಯೂ.ಆರ್. ಕೋಡ್‌ಗಳು ಮುದ್ರಿತವಾಗಿರುತ್ತವೆ. ವಿದ್ಯಾರ್ಥಿಯು ತನಗೆ ವಿತರಿಸಿದ ಒ.ಎಂ.ಆರ್ ತನ್ನದೇ ಎಂದು ಖಾತರಿಪಡಿಸಿಕೊಂಡು ಸರಿಯಾದ ಉತ್ತರಗಳನ್ನು ಶೇಡ್ ಮಾಡುವುದು.

**4. ಪುನರಾವರ್ತಿತ ಅಭ್ಯರ್ಥಿಗಳು (CCERR,CCEPR,NSR & NSPR) ಪತ್ರಿಕೆ–01 ಅಥವಾ ಪತ್ರಿಕೆ–02ರಲ್ಲಿರುವ ಎಲ್ಲಾ ವಿಷಯಗಳಿಗೂ ಉತ್ತರಿಸಬೇಕೇ?**

ಉ : ಪತ್ರಿಕೆ–01 ಕೋರ್ ವಿಷಯಗಳಿಗೆ ಮತ್ತು ಪತ್ರಿಕೆ–02 ಭಾಷಾ ವಿಷಯಗಳಿಗೆ ಸಂಬಂಧಿಸಿದ್ದಾಗಿದ್ದು. ಪ್ರತಿಯೊಂದು ಪತ್ರಿಕೆಯಲ್ಲಿರುವ ವಿಷಯಗಳ ಪ್ರಶ್ನೆಪತ್ರಿಕೆಯು ಪ್ರತ್ಯೇಕವಾದ ಪುಸ್ತಿಕೆಯನ್ನು ಹೊಂದಿರುತ್ತದೆ. ಪುನರಾವರ್ತಿತ

ಅಭ್ಯರ್ಥಿಗಳು ತಾವು ಅನುತ್ತೀರ್ಣರಾದ ವಿಷಯಗಳಿಗೆ ಮಾತ್ರ ಪರೀಕ್ಷೆಯನ್ನು ಬರೆಯುವುದು. ಆದರೆ ಪರೀಕ್ಷೆ ಪೂರ್ಣಗೊಳ್ಳುವವರೆಗೂ ಪರೀಕ್ಷಾ ಕೊಠಡಿಯಲ್ಲಿರುವುದು ಕಡ್ಡಾಯ.

ಉದಾಹರಣೆಗೆ ; 'X' ಎಂಬ ವಿದ್ಯಾರ್ಥಿಯು ಗಣಿತ ಮತ್ತು ವಿಜ್ಞಾನ ವಿಷಯಗಳಲ್ಲಿ ಅನುತ್ತೀರ್ಣರಾಗಿದಲ್ಲಿ, ಗಣಿತ ಮತ್ತು ವಿಜ್ಞಾನ ವಿಷಯಗಳ ಪ್ರತ್ಯೇಕವಾದ ಪ್ರಶ್ನೆಪತ್ರಿಕೆಯನ್ನು ಮತ್ತು ಆ ವಿಷಯಗಳಿಗೆ ಸಂಬಂಧಿಸಿದ ಒ.ಎಂ.ಆರ್ ಪಡೆದು ಉತ್ತರಿಸುವುದು. ವಿದ್ಯಾರ್ಥಿಯು ಎರಡು ವಿಷಯಗಳಿಗೆ ಮಾತ್ರ ಪರೀಕ್ಷೆ ಬರೆಯುತ್ತಿದ್ದರೂ, ಪರೀಕ್ಷೆ ಮುಗಿಯುವವರೆಗೂ ಅಂದರೆ 10.30 ರಿಂದ 01.30ರವರೆಗೂ ಪರೀಕ್ಷಾ ಕೇಂದ್ರದಲ್ಲಿ ಹಾಜರಿರುವುದು. ಯಾವುದೇ ಕಾರಣಕ್ಕೂ ಪರೀಕ್ಷಾ ಅವಧಿಯ ಮಧ್ಯದಲ್ಲಿ ಪರೀಕ್ಷಾ ಕೊಠಡಿಯಿಂದ ಹೊರಹೋಗಲು ಅನುಮತಿಸುವುದಿಲ್ಲ.

**5. ಒ.ಎಂ.ಆರ್‌ಗಳು ಇಂತಹುದೇ ವಿಷಯದ್ದು ಎಂದು ಗುರುತಿಸುವುದು ಹೇಗೆ?**

**ಉ:** ಪತ್ರಿಯೊಂದು ವಿಷಯವೂ ಪತ್ಯೇಕವಾದ ಒ.ಎಂ.ಆರ್.ನ್ನು ಹೊಂದಿರುವುದರಿಂದ ವಿವಿಧ ಬಣ್ಣಗಳಲ್ಲಿ ನೀಡಲಾಗುತ್ತಿದೆ.

| **ವಿಷಯಗಳು** | **ಪ್ರಥಮ ಭಾಷೆಗಳು & ಗಣಿತ/ ಪರ್ಯಾಯ ವಿಷಯ-01** | **ದ್ವಿತೀಯ ಭಾಷೆ & ವಿಜ್ಞಾನ/ ಪರ್ಯಾಯ ವಿಷಯ-02** | **ತೃತೀಯ ಭಾಷೆ /ಎನ್.ಎಸ್.ಕ್ಯೂ.ಎಫ್ & ಸಮಾಜ ವಿಜ್ಞಾನ** | **ಜೆ.ಟಿ.ಎಸ್. ವಿಷಯಗಳು** |
|---|---|---|---|---|
| **ಒ.ಎಂ.ಆರ್. ಬಣ್ಣ** | Pink Color | Orange Color | Green Color | Blue Color |
| **ಪ್ರಶ್ನೆಗಳ ಕ್ರಮಸಂಖ್ಯೆ** | 01 ರಿಂದ 40 | 41 ರಿಂದ 80 | 81 ರಿಂದ 120 | 71 ವಿಷಯಕ್ಕೆ- 01 ರಿಂದ 50<br>72 ವಿಷಯಕ್ಕೆ – 51 ರಿಂದ 75<br>73 & 74 ವಿಷಯಗಳಿಗೆ– 01 ರಿಂದ 45 |

ವಿಷಯಗಳನ್ನು ಒ.ಎಂ.ಆರ್‌ನಲ್ಲಿ ಪ್ರಧಾನವಾಗಿ ಮುದ್ರಿಸಲಾಗಿರುತ್ತದೆ. ಅಲ್ಲದೇ ಈ ಮೇಲಿನಂತೆ ಬಣ್ಣ ಮತ್ತು ವಿಷಯಗಳ ಪ್ರಶ್ನೆಗಳ ಕ್ರಮಸಂಖ್ಯೆಯನ್ನು ಆಧರಿಸಿ ಒ.ಎಂ.ಆರ್‌ಗಳು ಇಂತಹುದೇ ವಿಷಯದ್ದು ಎಂದು ಗುರುತಿಸಬಹುದಾಗಿದೆ.

**6. ಪ್ರಸ್ತುತ ವರ್ಷದ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಪಾಠದ ಮಧ್ಯ ಭಾಗದಿಂದ ಪ್ರಶ್ನೆಗಳನ್ನು ಕೇಳಲಾಗುತ್ತದೆಯೇ? ಮತ್ತು ಪ್ರಶ್ನೆಗಳನ್ನು ಟ್ವಿಸ್ಟ್ ಮಾಡಿ ಕೇಳಲಾಗುತ್ತದೆಯೇ? ಇದರಿಂದ ವಿದ್ಯಾರ್ಥಿಗಳಿಗೆ ಸಮಸ್ಯೆಯಾಗುವುದಿಲ್ಲವೇ?**

**ಉ** : ಪ್ರಸ್ತುತ ವರ್ಷದ ಪ್ರಶ್ನೆಪತ್ರಿಕೆಯಲ್ಲಿ ಸರಳ ಮತ್ತು ನೇರವಾದ ಪ್ರಶ್ನೆಗಳಿದ್ದು ಪಠ್ಯದ ಮುಖ್ಯಾಂಶ ಮತ್ತು ಅಭ್ಯಾಸದ ಆಧಾರಿತವಾಗಿರುತ್ತದೆ. ಟ್ವಿಸ್ಟ್ ಮಾಡಿ ಕೇಳಲಾದ ಪ್ರಶ್ನೆಗಳು ಅನ್ವಯದ ಬೋಧನಾ ಉದ್ದೇಶದ ವ್ಯಾಪ್ತಿಗೆ ಬರುವಂತಹುದಾಗಿದ್ದು, ಪ್ರಸ್ತುತ ಪರೀಕ್ಷೆಯಲ್ಲಿ ಅನ್ವಯದ ಪ್ರಶ್ನೆಗಳನ್ನು ಹೊರಗಿಡಲಾಗಿದೆ.

**ವಿದ್ಯಾರ್ಥಿಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಮಾದರಿ ಪ್ರಶ್ನೆಪತ್ರಿಕೆಗಳನ್ನು ಈಗಾಗಲೇ ಮಂಡಳಿಯ ವೆಬ್‌ಸೈಟ್ (https://sslc.karnataka.gov.in) ನಲ್ಲಿ ಪ್ರಕಟಿಸಲಾಗಿದೆ.**

**7. ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಎಲ್ಲೆಲ್ಲಿ ಸಹಿ ಮಾಡಬೇಕು?**

**ಉ** : ವಿದ್ಯಾರ್ಥಿಗಳು ಒ.ಎಂ.ಆರ್, ಕೇಂದ್ರ ನಾಮಯಾದಿ ಪಟ್ಟಿ (CNR) ಮತ್ತು ಫ್ರೋಫಾರ್ಮಾದಲ್ಲಿ ಕಡ್ಡಾಯವಾಗಿ ಸಹಿ ಮಾಡುವುದು. ಅಲ್ಲದೇ ಕೊಠಡಿ ಮೇಲ್ವಿಚಾರಕರು ಸಹ ಒ.ಎಂ.ಆರ್‌ನಲ್ಲಿ ಸಹಿ ಮಾಡುವುದು ಕಡ್ಡಾಯವಾಗಿದ್ದು, ವಿದ್ಯಾರ್ಥಿಗಳು ಇದನ್ನು ಖಾತ್ರಿಪಡಿಸಿಕೊಳ್ಳುವುದು.

**8. ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಕೋರ್ ವಿಷಯಗಳಿಗೆ ಸಂಬಂಧಿಸಿದಂತೆ ಮೊದಲು ಗಣಿತ, ನಂತರ ವಿಜ್ಞಾನ, ತದನಂತರ ಸಮಾಜ ವಿಜ್ಞಾನ ಪ್ರಶ್ನೆಪತ್ರಿಕೆಗಳಿಗೆ ಉತ್ತರಿಸಬೇಕೆ?**

**ಉ** : ಇಲ್ಲಾ. ಪರೀಕ್ಷೆಯ ಪ್ರಾರಂಭದಲ್ಲೇ ಮೂರು ವಿಷಯಗಳ ಪ್ರಶ್ನೆಪತ್ರಿಕೆ ಮತ್ತು ಮೂರು ವಿಷಯಗಳ ಒ.ಎಂ.ಆರ್.ಗಳನ್ನು ಒಟ್ಟಿಗೆ ವಿತರಿಸುವಂತೆ ಮತ್ತು ಪುನರಾವರ್ತಿತ ವಿದ್ಯಾರ್ಥಿಗಳಿಗೆ ನೋಂದಣಿಯಾಗಿರುವ ವಿಷಯಗಳಿಗನುಸಾರವಾಗಿ ಪ್ರಶ್ನೆಪತ್ರಿಕೆ ಮತ್ತು ಒ.ಎಂ.ಆರ್.ಗಳನ್ನು ಒಟ್ಟಿಗೆ ವಿತರಿಸುವಂತೆ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು ಮತ್ತು ಕೊಠಡಿ ಮೇಲ್ವಿಚಾರಕರಿಗೆ ನಿರ್ದೇಶನ ನೀಡಲಾಗಿದೆ. **ಪರೀಕ್ಷೆಯ ಮೂರು ಗಂಟೆಯ ಅವಧಿಯಲ್ಲಿ**

ವಿದ್ಯಾರ್ಥಿಯು ಯಾವುದೇ ವಿಷಯವನ್ನು ಮೊದಲು ಅಥವಾ ನಂತರ ಉತ್ತರಿಸುವ ಸ್ವಾತಂತ್ರ್ಯವನ್ನು ಹೊಂದಿದ್ದು, ಮೊದಲು ಇಂತಹುದೇ ವಿಷಯವನ್ನು ಉತ್ತರಿಸಬೇಕೆಂದು ನಿರ್ಬಂಧವಿಲ್ಲ.

**9. ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಒಂದು ಅಥವಾ ಎರಡು ವಿಷಯಗಳಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳು ಮತ್ತು ಎಲ್ಲಾ ಮೂರು ವಿಷಯಗಳನ್ನು ಬರೆಯುತ್ತಿರುವ ಶಾಲಾ ಮತ್ತು ಖಾಸಗಿ ವಿದ್ಯಾರ್ಥಿಗಳು ಬೇಗ ಉತ್ತರಿಸಿ ಪರೀಕ್ಷಾ ಕೊಠಡಿಯಿಂದ ನಿರ್ಗಮಿಸಬಹುದೇ?**

**ಉ** : ಇಲ್ಲಾ. ಒಂದು ಅಥವಾ ಎರಡು ವಿಷಯಗಳ ಪರೀಕ್ಷೆಯನ್ನು ಬರೆಯುತ್ತಿರುವ ಯಾವುದೇ ಪುನರಾವರ್ತಿತ ಅಭ್ಯರ್ಥಿಗಳು ಮತ್ತು ಎಲ್ಲಾ ವಿಷಯಗಳನ್ನು ಬರೆಯುತ್ತಿರುವ ಶಾಲಾ ಮತ್ತು ಖಾಸಗಿ ಅಭ್ಯರ್ಥಿಗಳು ಬೇಗನೇ ಉತ್ತರಿಸಿದರೂ ಪರೀಕ್ಷಾ ಅವಧಿ ಮುಗಿಯುವವರೆಗೂ ಅಂದರೆ 10.30 ರಿಂದ 01.30ರವರಗೆ ಪರೀಕ್ಷಾ ಕೊಠಡಿಯಲ್ಲಿ ಇರುವುದು ಕಡ್ಡಾಯ. ಯಾವುದೇ ಕಾರಣಕ್ಕೂ ಪರೀಕ್ಷಾ ಅವಧಿಯ ಮಧ್ಯಭಾಗದಲ್ಲಿ ಪರೀಕ್ಷಾ ಕೊಠಡಿಯಿಂದ ಹೊರಹೋಗಲು ಅನುಮತಿಸುವುದಿಲ್ಲ.

**10. ಪರ್ಯಾಯ ವಿಷಯಗಳನ್ನು ಆಯ್ಕೆ ಮಾಡಿಕೊಂಡಿರುವ ಮತ್ತು ಎನ್.ಎಸ್.ಕ್ಯೂ.ಎಫ್ ವಿಷಯಗಳನ್ನು ಆಯ್ಕೆಮಾಡಿಕೊಂಡಿರುವ ವಿದ್ಯಾರ್ಥಿಗಳಿಗೂ ಬಹು ಆಯ್ಕೆ ಪ್ರಶ್ನೆ ಮಾದರಿಯಲ್ಲೇ ಪ್ರಶ್ನೆಪತ್ರಿಕೆಗಳು ಇರುತ್ತವೆಯೇ?**

**ಉ** : ಹೌದು. ಗಣಿತ ಮತ್ತು ವಿಜ್ಞಾನ ವಿಷಯಗಳಿಗೆ ಪರ್ಯಾಯವಾಗಿ ಆಯ್ಕೆ ಮಾಡಿಕೊಳ್ಳುವ ಸಮಾಜಶಾಸ್ತ್ರ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ ವಿಷಯಗಳ ಪ್ರಶ್ನೆಪತ್ರಿಕೆಯು ಗರಿಷ್ಠ 40 ಅಂಕಗಳಿಗೆ ಬಹು ಆಯ್ಕೆ ಮಾದರಿಯ ಪ್ರಶ್ನೆಪತ್ರಿಕೆಯನ್ನು ಹೊಂದಿದ್ದು, ಈ ವಿಷಯಗಳ ಪ್ರತಿ ಪ್ರಶ್ನೆಪತ್ರಿಕೆಯ ಪ್ರತೀ ಪ್ರಶ್ನೆಯು ಉಭಯ(ಎರಡು) ಸಂಖ್ಯೆಗಳ(1/41, 2/42, 3/43……)ನ್ನು ಹೊಂದಿದೆ. ವಿದ್ಯಾರ್ಥಿಯು ಈ ಮೇಲಿನ ವಿಷಯಗಳಲ್ಲಿ ಯಾವುದಾದರೂ ಒಂದು ವಿಷಯವನ್ನು ಗಣಿತ ವಿಷಯದ ಬದಲಾಗಿ ಪರ್ಯಾಯ ವಿಷಯ–1 ಆಗಿ ಆಯ್ಕೆ ಮಾಡಿಕೊಂಡಿದ್ದಲ್ಲಿ ಪ್ರಶ್ನೆಗಳ ಸಂಖ್ಯೆ 1 ರಿಂದ 40 ನ್ನು ಪರಿಗಣಿಸಿ, ಅದಕ್ಕನುಗುಣವಾಗಿ, ಪ್ರಶ್ನೆಗಳ ಸಂಖ್ಯೆ 1 ರಿಂದ 40 ಇರುವ ಒ.ಎಂ.ಆರ್ ಪಡೆದು ಶೇಡ್ ಮಾಡುವುದು. ಅದೇ ರೀತಿ ಈ ಮೇಲಿನ ವಿಷಯಗಳಲ್ಲಿ ಯಾವುದಾದರೂ ಒಂದು ವಿಷಯವನ್ನು ವಿಜ್ಞಾನ ವಿಷಯ ಬದಲಾಗಿ ಪರ್ಯಾಯ ವಿಷಯ –2 ಆಗಿ ಆಯ್ಕೆ ಮಾಡಿಕೊಂಡಿದ್ದಲ್ಲಿ ಪ್ರಶ್ನೆಗಳ ಸಂಖ್ಯೆ 41 ರಿಂದ 80 ನ್ನು ಪರಿಗಣಿಸಿ, ಅದಕ್ಕನುಗುಣವಾಗಿ 41 ರಿಂದ 80 ಪ್ರಶ್ನೆಗಳ ಸಂಖ್ಯೆ ಇರುವ ಒ.ಎಂ.ಆರ್. ಪಡೆದು ಶೇಡ್ ಮಾಡುವುದು. ಉಳಿದಂತೆ ಹಿಂದೂಸ್ಥಾನಿ/ ಕರ್ನಾಟಕ ಸಂಗೀತ ವಿಷಯದ ತಾತ್ವಿಕ ಪ್ರಶ್ನೆಪತ್ರಿಕೆಯು ಗರಿಷ್ಠ 20 ಅಂಕಗಳ ಬಹು ಆಯ್ಕೆ ಪ್ರಶ್ನೆಪತ್ರಿಕೆ ಮಾದರಿಯನ್ನು ಹೊಂದಿದ್ದು, ಪ್ರಾಯೋಗಿಕ ಪರೀಕ್ಷೆಯು 40 ಅಂಕಗಳ ಪ್ರಶ್ನೆಪತ್ರಿಕೆಯನ್ನು ಹೊಂದಿರುತ್ತದೆ. ಈ ವಿಷಯವನ್ನು ಆಯ್ಕೆ ಮಾಡಿಕೊಂಡಿರುವ ವಿದ್ಯಾರ್ಥಿಗಳಿಗೆ ತಾತ್ವಿಕ ಪರೀಕ್ಷೆಯ ಅಪರಾಹ್ನ ಅದೇ ಪರೀಕ್ಷಾ ಕೇಂದ್ರದಲ್ಲಿ ಪ್ರಾಯೋಗಿಕ ಪರೀಕ್ಷೆಯನ್ನು ನಡೆಸಲಾಗುತ್ತದೆ.

ಇನ್ನೂ ಎನ್.ಎಸ್.ಕ್ಯೂ.ಎಫ್ ವಿಷಯಗಳಿಗೆ ಸಂಬಂಧಿಸಿದಂತೆ ಪ್ರತಿ ವರ್ಷ ಎನ್.ಎಸ್.ಕ್ಯೂ.ಎಫ್ ವಿಷಯವನ್ನು ಆಯ್ಕೆ ಮಾಡಿಕೊಂಡ ಅಭ್ಯರ್ಥಿಗಳಿಗೆ ತಾತ್ವಿಕ(ಥಿಯರಿ) ಪರೀಕ್ಷೆಯನ್ನು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು ಹಾಗೂ ಪ್ರಾಯೋಗಿಕ ಪರೀಕ್ಷೆಯನ್ನು ಸೆಕ್ಟರ್ ಸ್ಕಿಲ್ ಕೌನ್ಸಿಲ್ ಸಂಸ್ಥೆಗಳ ಮೂಲಕ ನಡೆಸಲಾಗುತ್ತಿತ್ತು. ಪ್ರಸ್ತುತ ವರ್ಷ ಎನ್.ಎಸ್.ಕ್ಯೂ.ಎಫ್. ವಿಷಯಗಳನ್ನು ಆಯ್ಕೆ ಮಾಡಿಕೊಂಡಿರುವ 10ನೇ ತರಗತಿಯ ವಿದ್ಯಾರ್ಥಿಗಳಿಗೆ ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು ರವರು ಪ್ರಾಯೋಗಿಕ ಪರೀಕ್ಷೆಗಳಿಂದ ವಿನಾಯಿತಿ ನೀಡಿರುವುದರಿಂದ, ತಾತ್ವಿಕ ಪರೀಕ್ಷೆಯನ್ನು 40 ಬಹು ಆಯ್ಕೆ ಪ್ರಶ್ನೆ ಮಾದರಿಯಲ್ಲಿ ನಡೆಸಲಾಗುತ್ತದೆ. ಸದರಿ ಅಂಕಗಳನ್ನು 80 ಅಂಕಗಳಿಗೆ ಪರಿವರ್ತಿಸಿ ಆಂತರಿಕ ಮೌಲ್ಯಮಾಪನದ 20 ಅಂಕಗಳನ್ನು ಸೇರಿಸಿ ಫಲಿತಾಂಶವನ್ನು ಪ್ರಕಟಿಸಲಾಗುವುದು.

ಮುಂದುವರೆದು 2020–21ನೇ ಸಾಲಿನಲ್ಲಿ ಎನ್.ಎಸ್.ಕ್ಯೂ.ಎಫ್.ನ ಹೆಲ್ತ್‌ಕೇರ್ ವಿಷಯವನ್ನು ಆಯ್ಕೆ ಮಾಡಿಕೊಂಡಿರುವ ಲೆವೆಲ್–2ನ 10ನೇ ತರಗತಿಯ ವಿದ್ಯಾರ್ಥಿಗಳು ಯಾರು ಇರುವುದಿಲ್ಲವಾದ್ದರಿಂದ, ಸದರಿ ವಿಷಯದ ಪರೀಕ್ಷೆಗೆ ಹಾಜರಾಗುತ್ತಿರುವ ಪುನರಾವರ್ತಿತ ವಿದ್ಯಾರ್ಥಿಗಳಿಗೆ ಹಿಂದಿನ ವರ್ಷಗಳಲ್ಲೇ ಪ್ರಾಯೋಗಿಕ ಪರೀಕ್ಷೆ

ನಡೆದಿರುವುದರಿಂದ, ಸದರಿ ವಿದ್ಯಾರ್ಥಿಗಳಿಗೆ ತಾತ್ವಿಕ ಪರೀಕ್ಷೆಯನ್ನು 30 ಬಹು ಆಯ್ಕೆ ಪ್ರಶ್ನೆ ಮಾದರಿಯಲ್ಲಿ ನಡೆಸಲಾಗುವುದು ಹಾಗೂ ಫಲಿತಾಂಶವನ್ನು ಹಿಂದಿನ ವರ್ಷದ ರೀತಿಯಲ್ಲಿಯೇ ಪ್ರಕಟಿಸಲಾಗುವುದು.

**11. ಜೆ.ಟಿ.ಎಸ್ ವಿಷಯಗಳ ಪ್ರಶ್ನೆಪತ್ರಿಕೆಗಳ ಸ್ವರೂಪ ಹೇಗಿರುತ್ತದೆ?**

**ಉ** : ಕಿರಿಯ ತಾಂತ್ರಿಕ ಶಾಲೆಗಳಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳು ಮಾತ್ರ ಜೆ.ಟಿ.ಎಸ್ ವಿಷಯಗಳ ಪರೀಕ್ಷೆಗೆ ನೋಂದಾಯಿಸಿದ್ದು, ಈ ವಿಷಯಗಳ ಪ್ರಶ್ನೆಪತ್ರಿಕೆಯು ಪತ್ರಿಕೆ-03 ಆಗಿದ್ದು, ಬಹು ಆಯ್ಕೆ ಪ್ರಶ್ನೆಗಳ ಮಾದರಿಯಲ್ಲೇ ಇರುತ್ತದೆ. 71 ವಿಷಯ ಸಂಕೇತದ ಪತ್ರಿಕೆಯು 50 ಅಂಕಗಳಿಗೆ, 72 ವಿಷಯ ಸಂಕೇತದ ಪತ್ರಿಕೆಯು 25 ಅಂಕಗಳಿಗೆ, 73 & 74 ವಿಷಯ ಸಂಕೇತದ ಪತ್ರಿಕೆಯು 45 ಅಂಕಗಳ ಪ್ರಶ್ನೆಗಳನ್ನು ಒಳಗೊಂಡಿರುತ್ತದೆ.

**12. ಸದರಿ ವರ್ಷದ ಎಸ್.ಎಸ್.ಎಲ್.ಸಿ ಪರೀಕ್ಷೆಯನ್ನು ಯಾವುದೇ ಭಯ ಮತ್ತು ಆತಂಕವಿಲ್ಲದೇ ಎದುರಿಸುವುದು ಹೇಗೆ?**

**ಉ** : ವಿದ್ಯಾರ್ಥಿಗಳು ಪ್ರಸ್ತುತ ವರ್ಷ ಮೌಲ್ಯಮಾಪನಕ್ಕೆ ಗುರುತಿಸಿರುವ ಅಧ್ಯಾಯಗಳನ್ನು ಸಮಗ್ರ ಮತ್ತು ವ್ಯಾಪಕವಾಗಿ ಅಧ್ಯಯನ ಮಾಡುವುದು. ಮಂಡಳಿಯು ನೀಡಿರುವ ಮಾದರಿ ಪ್ರಶ್ನೆಪತ್ರಿಕೆಯನ್ನು ವಿಶ್ಲೇಷಿಸಿ ಅದರಂತೆ ಸಿದ್ಧತೆಯನ್ನು ಮಾಡಿಕೊಂಡು ಅಧ್ಯಯನ ನಡೆಸಿದ್ದಲ್ಲಿ ಯಾವುದೇ ಭಯ, ಆತಂಕವಿಲ್ಲದೇ ಪರೀಕ್ಷೆಯನ್ನು ಆತ್ಮವಿಶ್ವಾಸದಿಂದ ಎದುರಿಸಬಹುದಾಗಿದೆ.

**13. ಪರೀಕ್ಷಾ ಕೊಠಡಿಯಲ್ಲಿ ವಿದ್ಯಾರ್ಥಿಗಳು ಪಾಲಿಸಬೇಕಾದ ನಿಯಮಗಳು ಯಾವುವು?**

**ಉ** : ವಿದ್ಯಾರ್ಥಿಗಳು ತಮಗೆ ನಿಗದಿಪಡಿಸಿರುವ ಸ್ಥಳದಲ್ಲಿಯೇ ಕುಳಿತುಕೊಂಡು ಪರೀಕ್ಷೆ ಬರೆಯುವುದು. ಯಾವುದೇ ಕಾರಣಕ್ಕೂ ಗೈರು ಹಾಜರಾದ ವಿದ್ಯಾರ್ಥಿಯ ಜಾಗದಲ್ಲಿ ಕುಳಿತು ಪರೀಕ್ಷೆ ಬರೆಯಬಾರದು. ಮತ್ತು ಪರೀಕ್ಷಾ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ಪುಸ್ತಕ, ಚೀಟಿ,ಕಾಗದ, ಕೈ ಬರಹ, ವಿದ್ಯುನ್ಮಾನ ಉಪಕರಣಗಳು, ಮೊಬೈಲ್ ಫೋನ್, ಸ್ಮಾರ್ಟ್/ಡಿಜಿಟಲ್ ವಾಚ್‌ನ್ನು ಹೊಂದಿರಬಾರದು. ಅನಲಾಗ್ ಕೈ ಗಡಿಯಾರವನ್ನು ಧರಿಸಿ ಬರಬಹುದಾಗಿದೆ.

ಬಹುಮುಖ್ಯವಾಗಿ ಪ್ರಮಾಣಿತ ಕಾರ್ಯಾಚರಣಾ ವಿಧಾನ (ಎಸ್.ಒ.ಪಿ)ದಲ್ಲಿ ತಿಳಿಸಿರುವ ಅಂಶಗಳನ್ನು ಯಥಾವತ್ತು ಪಾಲನೆ ಮಾಡುವುದು.

ಎ) ಬೆಳಿಗ್ಗೆ 09.00 ಗಂಟೆಗೆ ಪರೀಕ್ಷಾ ಕೇಂದ್ರಕ್ಕೆ ಹಾಜರಾಗಿ 'ಆರೋಗ್ಯ ತಪಾಸಣಾ ಕೌಂಟರ್'ನಲ್ಲಿ ಆರೋಗ್ಯ ತಪಾಸಣೆಗೆ ಒಳಪಡುವುದು.

ಬಿ) ಉತ್ತಮವಾದ, ಸರಿಯಾದ ಅಳತೆಯುಳ್ಳ ಉತ್ತಮ ಗುಣಮಟ್ಟದ ಸುರಕ್ಷಿತ ಮಾಸ್ಕ್ ಧರಿಸಿರುವುದು.

ಸಿ) ಪರೀಕ್ಷಾ ಕೇಂದ್ರದಲ್ಲಿ ಸೂಚನಾ ಫಲಕದ ಮುಂದೆ, ಕೊಠಡಿಯನ್ನು ಪ್ರವೇಶಿಸುವಾಗ, ಪರೀಕ್ಷೆ ಮುಗಿದ ನಂತರ ಹೊರಗೆ ಹೋಗುವ ಸಮಯದಲ್ಲಿ ಗುಂಪಾಗಿ ನಿಲ್ಲದೇ ದೈಹಿಕ ಅಂತರವನ್ನು ಕಾಪಾಡುವುದು.

ಡಿ) ಪರೀಕ್ಷಾ ಕೇಂದ್ರದ ದ್ವಾರದಲ್ಲೇ ಕೈಗಳನ್ನು ಸ್ಯಾನಿಟೈಸ್ ಮಾಡಿಕೊಂಡು ಪರೀಕ್ಷಾ ಕೇಂದ್ರವನ್ನು ಪ್ರವೇಶಿಸುವುದು.

ಇ) ಪರೀಕ್ಷಾ ಕೇಂದ್ರದ ಮುಂಭಾಗದಲ್ಲಿ ಬರೆಯಲಾಗಿರುವ ಚೌಕಾಕಾರದ ಬಾಕ್ಸ್‌ಗಳ ಮೂಲಕವೇ ದೈಹಿಕ ಅಂತರವನ್ನು ಕಾಯ್ದುಕೊಂಡು ಪರೀಕ್ಷಾ ಕೇಂದ್ರವನ್ನು ಪ್ರವೇಶಿಸುವುದು ಮತ್ತು ಹೊರಬರುವುದು.

**ಎಫ್)** ಕೆಮ್ಮು/ನೆಗಡಿ/ಜ್ವರ ಮೊದಲಾದವುಗಳಿಂದ ಬಳಲುತ್ತಿರುವ/ಲಕ್ಷಣಗಳಿರುವ ವಿದ್ಯಾರ್ಥಿಯು ಎನ್-95 ಮಾಸ್ಕ್ ಧರಿಸುವುದು. ಹಾಗೂ ಈ ಬಗ್ಗೆ ಮಾಹಿತಿ ನೀಡಿ ವೈದ್ಯಕೀಯ ತಪಾಸಣೆಗೆ ಒಳಪಟ್ಟು ಕಾಯ್ದಿರಿಸಿದ ವಿಶೇಷ ಕೊಠಡಿಯಲ್ಲಿ ಪರೀಕ್ಷೆ ಬರೆಯುವುದು.

ಜಿ) ಪ್ರತಿ ವಿದ್ಯಾರ್ಥಿಯು ತಮ್ಮದೇ ಆದ ನೀರಿನ ಬಾಟಲ್‌ಗಳನ್ನು ತರಲು ಅವಕಾಶ ಕಲ್ಪಿಸಲಾಗಿದೆ.

**14. ಪರೀಕ್ಷಾ ಕೇಂದ್ರದಲ್ಲಿ ಎಷ್ಟು ಸಮಯದ ಮೊದಲು ಹಾಜರಿರಬೇಕು?**

**ಉ** : ಕೋವಿಡ್-19 ರ ಹಿನ್ನೆಲೆಯಲ್ಲಿ ಪರೀಕ್ಷಾ ಕೇಂದ್ರಕ್ಕೆ ಹಾಜರಾಗುತ್ತಿರುವ ಪ್ರತಿ ವಿದ್ಯಾರ್ಥಿ ಮತ್ತು ಸಿಬ್ಬಂದಿಯ ಆರೋಗ್ಯ ತಪಾಸಣೆ ಮಾಡುತ್ತಿರುವುದರಿಂದ ಪರೀಕ್ಷಾ ಕೇಂದ್ರದಲ್ಲಿ ಪ್ರತಿ ಪರೀಕ್ಷಾ ದಿನದಂದು ವಿದ್ಯಾರ್ಥಿಗಳು ಬೆಳಿಗ್ಗೆ 09.00 ಕ್ಕೆ ಹಾಜರಿರುವುದು. ಪರೀಕ್ಷೆ 10.30ಕ್ಕೆ ಪ್ರಾರಂಭವಾಗುವುದು.

**15. ಸದರಿ ವರ್ಷ ಫಲಿತಾಂಶವನ್ನು ವಿಷಯವಾರು ಗರಿಷ್ಠ 40 ಅಂಕಗಳಿಗೆ ಸೀಮಿತಗೊಳಿಸಿ ಫಲಿತಾಂಶ ಪ್ರಕಟಿಸಲಾಗುವುದೇ?**

**ಉ** : ಇಲ್ಲಾ. ಪರೀಕ್ಷೆಯನ್ನು ಕೋವಿಡ್ 19ರ ಹಿನ್ನೆಲೆಯಲ್ಲಿ ಸರಳೀಕರಿಸಿದ ಭಾಗವಾಗಿ ಎರಡು ದಿನಗಳಿಗೆ ಸೀಮಿತಗೊಳಿಸಿ, ಬಹು ಆಯ್ಕೆ ಪ್ರಶ್ನೆ ಮಾದರಿಯಲ್ಲಿ ನಡೆಸಲಾಗುತ್ತಿದೆ. ಆದರೆ ಫಲಿತಾಂಶವನ್ನು ಹಿಂದಿನ ವರ್ಷಗಳ ರೀತಿಯಲ್ಲೇ ಪ್ರಕಟಿಸಲಾಗುವುದು. ಆದರೆ **ಸದರಿ ವರ್ಷ ಪರೀಕ್ಷೆಗೆ ಹಾಜರಾದ ಯಾವುದೇ ವಿದ್ಯಾರ್ಥಿಯನ್ನು ಅನುತ್ತೀರ್ಣಗೊಳಿಸಲಾಗುವುದಿಲ್ಲ.**

ಶಾಲಾ ಅಭ್ಯರ್ಥಿಗಳು/ಪುನರಾವರ್ತಿತ ಶಾಲಾ ಅಭ್ಯರ್ಥಿ(CCERF,CCERR)ಗಳಿಗೆ ವಿಷಯವಾರು ಗರಿಷ್ಠ 40 ಅಂಕಗಳನ್ನು, 80 ಅಂಕಗಳಿಗೆ ಪರಿವರ್ತಿಸಿ, ಪ್ರಥಮ ಭಾಷೆಯ ವಿಷಯಗಳ ಅಂಕಗಳನ್ನು 100 ಅಂಕಗಳಿಗೆ ಪರಿವರ್ತಿಸಿ, ಆಂತರಿಕ ಅಂಕಗಳನ್ನು ಸೇರಿಸಿ ಫಲಿತಾಂಶವನ್ನು ಪ್ರಕಟಿಸಲಾಗುವುದು.

ಖಾಸಗಿ ಅಭ್ಯರ್ಥಿಗಳು, ಖಾಸಗಿ ಪುನರಾವರ್ತಿತ ಅಭ್ಯರ್ಥಿಗಳು, ಎನ್.ಎಸ್.ಆರ್ ಮತ್ತು ಎನ್.ಎಸ್.ಪಿ.ಆರ್ ಅಭ್ಯರ್ಥಿಗಳಿಗೆ ವಿಷಯವಾರು ಗರಿಷ್ಠ 40 ಅಂಕಗಳನ್ನು, 100 ಅಂಕಗಳಿಗೆ ಪರಿವರ್ತಿಸಿ, ಪ್ರಥಮ ಭಾಷೆಯ ವಿಷಯಗಳ ಅಂಕಗಳನ್ನು 125 ಅಂಕಗಳಿಗೆ ಪರಿವರ್ತಿಸಿ ಫಲಿತಾಂಶವನ್ನು ಪ್ರಕಟಿಸಲಾಗುವುದು.

*****